# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

## 2025 ದ್ವಿತೀಯ ಪಿಯುಸಿ ಪರೀಕ್ಷೆ-1

**ವಿಷಯ: 01 - ಕನ್ನಡ          ಕೀಲಿ ಉತ್ತರಗಳು          ಗರಿಷ್ಠ ಅಂಕಗಳು: 80**

| ಪ್ರಶ್ನೆ ಸಂಖ್ಯೆ | | ಅಂಕಗಳು |
|---|---|---|
| | **ಅ- ವಿಭಾಗ** | 10X1=10 |
| ಅ 1 | ಇ) ಮಂಡೋದರಿ | 1 |
| 2 | ಈ) ಅಂಗದ ಮೇಲೆ ಲಿಂಗ ಧರಿಸಿದವನು | 1 |
| 3 | ಆ) ಗಂಡನ ಕರ್ತವ್ಯ | 1 |
| 4 | ಅ) ಊರಹಂದಿ | 1 |
| 5 | ಆ) ತಾಯಿ | 1 |
| 6 | ಇ) ಕಮಲ ಮೇಡಂ ಮತ್ತು ಮುದ್ದೇಗೌಡ | 1 |
| 7 | ಈ) ಕುದುಪನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಕಾಳಜಿ | 1 |
| 8 | ಆ) ಇಕಾಲಜಿಸ್ಟ್ | 1 |
| 9 | ಅ) ಡಿಪಾರ್ಟ್‌ಮೆಂಟ್‌ಗಳ ಮಧ್ಯದ ಹೊಂದಾಣಿಕೆಯ ಕೊರತೆ | 1 |
| 10 | ಇ) ಶಿಕಾರಿ ಗಂಡಿ | 1 |
| ಆ | | 5X1=5 |
| 11 | ಚಹಾ ಗಿಡ | 1 |
| 12 | ದ್ವೀಪಜೀವಿಗಳಾಗಿ | 1 |
| 13 | ಮಗು | 1 |
| 14 | ವಾತ್ಸಾಯನ | 1 |
| 15 | ಚಂದ್ರಭವನ | 1 |
| ಇ | | 5X1=5 |
| 16 | ಅ) ಪುರಂದರದಾಸ - 4) ಕೀರ್ತನೆ | 1 |
| | ಆ) ಬೆಳಗುಜಾವ - 5) ಮುಕ್ತಕಂಠ | 1 |
| | ಇ) ಶಿಲುಬೆ ಏರಿದ್ದಾನೆ - 1) ಕೆ.ಎಸ್.ನಿಸಾರ್ ಅಹಮದ್ | 1 |
| | ಈ) ಚಿಟ್ಟೆ ಮತ್ತು ಜೀವಯಾನ - 2) ಹತ್ತಿ.. ಚಿತ್ತ.. ಮತ್ತು.. | 1 |
| | ಉ) ಸುಕನ್ಯಾ ಮಾರುತಿ - 6) ಒಮ್ಮೆ ನಗುತ್ತೇವೆ | 1 |

| | ಆ- ವಿಭಾಗ | |
|---|---|---|
| ಅ | | 3X2=6 |
| 17 | ಯುದ್ಧದಲ್ಲಿ ರಾಮ ಲಕ್ಷ್ಮಣರನ್ನು ಪರಾಜಯಗೊಳಿಸಿ, ಸೀತೆಯನ್ನು ಅವರಿಗೊಪ್ಪಿಸುವೆನೆಂದು ತೀರ್ಮಾನಿಸಿದ. | 2 |
| 18 | ಪಾಂಡವರು ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ | 2 |
| 19 | ಕತ್ತಲನ್ನು ನೀಗಿಕೊಂಡ ಬಾನು ಮತ್ತೆ ಪ್ರಕಾಶಮಾನವಾಗಿ ಹೊಳೆಯುತ್ತದೆ. ಒಣಗಿದ ಮರ ಪುನಃ ಚಿಗುರುತ್ತದೆ ಎಂದು ಕವಿ ಬಾನು ಮತ್ತು ಮರಗಳ ನಿತ್ಯ ನೂತನತೆಯನ್ನು ಸಾರಿದ್ದಾರೆ. | 2 |
| 20 | ವೇಷ ಮರೆಸಿ, ರೈಫಲ್ಲು, ಟ್ಯಾಂಕು, ಬಾಂಬು, ಗ್ರೆನೇಡುಗಳ ರೂಪದಲ್ಲಿವೆ. | 2 |
| ಆ | | 2X2=4 |
| 21 | ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ, ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಲೇ ಇದ್ದಾಳೆ | 2 |
| 22 | ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ ? ಯಾವ ಪತ್ರಿಕೆ ಓದುತ್ತಿದ್ದೇವೆ ? ನಾವು ನೋಡುವುದು ಯಾವ ಸಿನಿಮಾಗಳನ್ನು ? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ ? ಬ್ಯಾಂಕ್ ಚೆಕ್ ಬರೆಯುವುದು ಕನ್ನಡದಲ್ಲೇ ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡದಲ್ಲಿದೆ ? ಈ ಪ್ರಶ್ನೆಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ... | 2 |
| 23 | ಕುತೂಹಲ, ಆಲೋಚನಾಶಕ್ತಿ, ಜ್ಞಾನ (ತಿಳಿವು), ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ. | 2 |
| 24 | ಹಾಗೂ ಸಾಯುತ್ತೇವೆ; ಹೀಗೂ ಸಾಯುತ್ತೇವೆ ಕರಿದಿದ್ದನ್ನು ತಿಂದು ಸಾಯುತ್ತೇವೆ ಎನ್ನುವುದು ಇವರ ಜಿದ್ದು. | 2 |
| ಇ | | 3X2=6 |
| 25 | ಮಠದಲ್ಲಿ ಬರಿ ಒಣಹುಲ್ಲು, ಮೊಸರನ್ನ ತಿಂದು ಸೊರಗಿದ್ದ ಆನೆಗೆ ಕೃಷ್ಣೇಗೌಡ ಬಯನೆಸೊಪ್ಪು, ಹಸಿಹುಲ್ಲು, ಹಿಂಡಿ, ಬೆಲ್ಲ, ಗೆಣಸು ಎಲ್ಲ ಕೊಟ್ಟು ಪಗಡುದಸ್ತಾಗಿ ಬೆಳೆಸಿದ. | 2 |
| 26 | ಏನೋ ಇನಾಮು ಕೇಳಲು ಅಥವಾ ಚಂದಾ ವಸೂಲಿಗೋ, ಇಲ್ಲವೆ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೋ ಕೇಳಲು ಬಂದಿರಬಹುದೆಂದು ನಿರೂಪಕರು ಯೋಚಿಸಿದರು. | 2 |

| | | |
|---|---|---|
| 27 | "ನಿಮ್ಮ ನೌಕರರು ಒಂದೇ ಒಂದು ನಾಯಿಯನ್ನೂ ಕೊಲ್ಲದೆ ನಿಮಗೆ ಸುಳ್ಳುಲೆಕ್ಕ ಕೊಟ್ಟಿದ್ದಾರೆ ಖಾನ್ ಸಾಬ್. ಇನ್ನು ಮುಂದೆ ನಾಯಿ ಕೊಂದರೆ ನಾಯಿ ಬಾಲ ತಗೊಂಡು ಬಂದು ತೋರಿಸಬೇಕು ಎಂದು ಹೇಳಿ. ಅವರ ಲೆಕ್ಕ ಸುಳ್ಳೋ ನಿಜವೋ ನಿಮಗೆ ಗೊತ್ತಾಗುತ್ತೆ" ಎಂದು ಸಲಹೆ ನೀಡಿದರು. | 2 |
| 28 | ಮನೆಯವರು, ಮೇಲಧಿಕಾರಿಗಳು ಹಾಗೂ ಊರಿನ ಜನರೆಲ್ಲಾ ನಿನ್ನದೇ ನಿರೀಕ್ಷೆಯಲ್ಲಿದ್ದಾರೆಂದೂ, ನಿನ್ನ ವಿರುದ್ಧ ಯಾವುದೇ ಕ್ರಮ ಅಥವಾ ಷೋಕಾಸ್ ನೋಟಿಸ್ ಅಥವಾ ತನಿಖೆ ನಡೆಸುವುದಿಲ್ಲವೆಂದೂ, ಈ ಮನವಿ ನೋಡಿದಕೂಡಲೇ ಎಲ್ಲಿದ್ದರೂ ಹಿಂದಿರುಗಿ ಬರತಕ್ಕುದೆಂದೂ ಜಾಹಿರಾತು ನೀಡಿದರು. | 2 |
| | **ಇ- ವಿಭಾಗ** | |
| ಅ | | 2X3=6 |
| | **(ಕವಿ/ ಲೇಖಕರು, ಗದ್ಯ/ಪದ್ಯಗಳ ಉಲ್ಲೇಖಕ್ಕೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭದೊಂದಿಗೆ ಸ್ವಾರಸ್ಯಕ್ಕೆ ಎರಡು ಅಂಕ)** | |
| 29 | ಪದ್ಯ: ಹಬ್ಬಲಿ ಅವರ ರಸಬಳ್ಳಿ<br>ಜನಪದ ಗೀತೆ<br>ತಾಯಿ ಮತ್ತು ತವರಿನ ಬಗ್ಗೆ ಮನದುಂಬಿ ಮಾತನಾಡುವ ಜನಪದಗರತಿ ಬೇಸಿಗೆಯಲ್ಲಿ ಬೇವಿನಮರ ತಂಪು, ಭೀಮರತಿಯೆಂಬ ಹೊಳೆ ತಂಪು ಹಾಗೇ ತನ್ನ ತವರಿಗೆ ಹಡೆದವ್ವ ತಂಪು ಎಂದು ಹೇಳುವ ಸಂದರ್ಭ. | 3 |
| 30 | ಪದ್ಯ: ಮುಂಬೈ ಜಾತಕ<br>ಕವಿ: ಜಿ.ಎಸ್.ಶಿವರುದ್ರಪ್ಪ<br>ನಗರೀಕರಣದಲ್ಲಿ ಮಗುವಿನ ಕಲಿಕೆಯ ಕುರಿತು ಪ್ರತಿಕ್ರಿಯಿಸುವ ಸಂದರ್ಭ. ಶಾಲಾ- ಕಾಲೇಜುಗಳು ಕಲಿಸಿದ್ದು, ಬೀದಿ ಬದಿಯ ಜಾಹಿರಾತು ತಲೆಗೆ ತುರುಕಿದ್ದು, ರೇಡಿಯೋ ಸಿಲೋನ್ ವಿಭಾಗದ ಶಿಫಾರಸ್ಸು ಬಿಟ್ಟರೆ ಮಗು ತಾನಾಗಿ ಕಲಿತಿದ್ದು ಕಡಿಮೆ. ನಗರ ಜೀವನದ ಯಾಂತ್ರಿಕ ಬದುಕಿನಲ್ಲಿ ಮಗುವಿನ ಸ್ವಯಂ ಕಲಿಕೆಯ ಅವಕಾಶದ ಕೊರತೆಯನ್ನು, ಬೇಕಿದ್ದನ್ನು ಬೇಡದಿದ್ದನ್ನೆಲ್ಲಾ ತಲೆಗೆ ತುಂಬುತ್ತಿರುವ ಜಾಹಿರಾತುಗಳನ್ನು ಕುರಿತು ಯೋಚಿಸುವ ಸಂದರ್ಭ. | 3 |
| 31 | ಪದ್ಯ: ಒಂದು ಹೂ ಹೆಚ್ಚಿಗೆ ಇಡುತೀನಿ<br>ಕವಿ: ಲಲಿತಾ ಸಿದ್ಧಬಸವಯ್ಯ<br>ಕಿರಿಮಗನೊಟ್ಟಿಗೆ ಅಸ್ಸಾಮಿನಲ್ಲಿರುವ ಮುದುಕನಿಗೆ ಅಲ್ಲಿಯ ಭಾಷೆ ಸ್ವಲ್ಪವೂ ಬರದು, ಮಗ ಮತ್ತು ಸೊಸೆ ಬೆಳಿಗ್ಗೆ ಒಂಬತ್ತಕ್ಕೆ ಮನೆ ಬಿಟ್ಟರೆ ಹಿಂತಿರುಗುವುದು ರಾತ್ರಿಯೇ. ಯಾರೊಟ್ಟಿಗೂ ಮಾತನಾಡಲು ಅವಕಾಶವಿಲ್ಲದ ಮುದುಕ ಮುದುಕಿಗೆ ಫೋನುಮಾಡಿ ತನ್ನ ಕಷ್ಟವನ್ನು ಹೇಳಿಕೊಳ್ಳುವ ಸಂದರ್ಭ. ಹಿರಿಜೀವಗಳ ತಳಮಳ, ಆತಂಕ, ನೋವು... | 3 |

| | | |
|---|---|---|
| ಆ | | 1X3=3 |
| 32 | ಗದ್ಯ: ವಾಲ್‌ಪರ್ರೈ: ಅಭಿವೃದ್ಧಿ ತಂದ ದುರಂತ<br>ಲೇಖಕರು: ಕೃಪಾಕರ ಸೇನಾನಿ, ಕೆ.ಪುಟ್ಟಸ್ವಾಮಿ<br>ಮಾನವ ಕೇಂದ್ರೀಕೃತ ಅಭಿವೃದ್ಧಿ ಅಲ್ಲಿಯ ಜೀವಸಂಕುಲಗಳ ಮೇಲೆ ಬೀರಿರಬಹುದಾದ ದುಷ್ಪರಿಣಾಮಗಳು, ಹಾಡು ಹಕ್ಕಿಗಳಾದ ವಿಷಿಲಿಂಗ್ ಥ್ರಷ್‌ಗಳ ದುರಂತದ ಬದುಕನ್ನು ಪ್ರಸ್ತಾಪಿಸುತ್ತಾ ತಮ್ಮ ನೋವಿನ ನಡುವೆಯೂ ಮುಂಜಾನೆ ಬೇಗನೆ ಎದ್ದು ರಾಗವಾಗಿ ಹಾಡುವುದನ್ನು ಮಾತ್ರ ಬಿಟ್ಟಿಲ್ಲ ಎಂದು ಹೇಳಿದ ಸಂದರ್ಭ. | 3 |
| 33 | ಗದ್ಯ: ಆಯ್ಕೆಯಿದೆ ನಮ್ಮ ಕೈಯಲ್ಲಿ<br>ಲೇಖಕರು: ನೇಮಿಚಂದ್ರ<br>ಬದುಕು ಸದಾ ಅದೃಷ್ಟಗಳನ್ನು ನಮ್ಮತ್ತ ಎಸೆಯದಿದ್ದರೂ ಬದುಕು ನೂರು, ಸಾವಿರ ಅವಕಾಶಗಳನ್ನು ತೆರೆದಿಡುತ್ತದೆ ಎಂದು ಹೇಳುತ್ತಾ ಹತ್ತನೇ ತರಗತಿ ಓದಿದ್ದ, ಚಿಕ್ಕಮಕ್ಕಳ ತಾಯಿ ಹಾಗೂ ಕ್ರೌರ್ಯ- ಹಿಂಸೆಯ ಮದುವೆಯಲ್ಲಿ ಸಿಲುಕಿದ್ದ ನಲವತ್ತರ ಹರೆಯದ ಫ್ಲೇವಿಯಾ ಅದೆಲ್ಲವನ್ನೂ ಮೆಟ್ಟಿ ವಿದ್ಯಾಭ್ಯಾಸ ಮುಂದುವರಿಸಿ ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದದ್ದನ್ನು ಹೇಳುವ ಸಂದರ್ಭ. ಎಂಥಾದ್ದೇ ಪರಿಸ್ಥಿತಿಯಲ್ಲಿಯೂ ನಮ್ಮೆದುರು ಆಯ್ಕೆಗಳಿರುತ್ತವೆ ಎಂಬುದನ್ನು ತಿಳಿಸಲು ಸೂಕ್ತ ನಿದರ್ಶನ. | 3 |
| 34 | ಗದ್ಯ: ತಿರುಳ್ಗನ್ನಡ ಬೆಳ್ನುಡಿ<br>ಲೇಖಕರು: ಮುದ್ದಣ<br>ಕ್ಲಿಷ್ಟ ಸಂಸ್ಕೃತ ವಾಕ್ಯರಚನೆಯ ಬಗ್ಗೆ ವಿರೋಧಿಸುತ್ತಾ ಮನೋರಮೇ ಮುದ್ದಣನಿಗೆ ಕನ್ನಡದ ಸೊಗಸನ್ನೇ ಸರಿಯಾಗಿ ತಿಳಿಯಲು ಸಮರ್ಥಳಲ್ಲದ ತನಗೆ ಸಂಸ್ಕೃತದ ಶಬ್ದಸರಣಿ 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತೆ' ಎಂದು ಹೇಳುವ ಸಂದರ್ಭ. ಸರಳ ಗದ್ಯ ಕನ್ನಡ ಕಸ್ತೂರಿಯಲ್ಲಿ ಕಾವ್ಯದ ನಿರೀಕ್ಷೆ. | 3 |
| ಇ | | 1X3=3 |
| 35 | ದೀರ್ಘಗದ್ಯ: ಕೃಷ್ಣೇಗೌಡರ ಆನೆ<br>ಲೇಖಕರು : ಕೆ.ಪಿ.ಪೂರ್ಣಚಂದ್ರ ತೇಜಸ್ವಿ<br>ವೇಲಾಯುಧನ ಆಜ್ಞೆಯಂತೆ ನಾಟಾಕ್ಕೆ ಕಟ್ಟಿದ್ದ ಹಗ್ಗ ಬಿಚ್ಚದೆ ಇದ್ದ ಲಾರಿಯನ್ನು ಆನೆ ಉರುಳಿಸಿದ ಪರಿಣಾಮವಾಗಿ ಸ್ಟೇರಿಂಗ್ ಮೇಲೆ ತಲೆ ಇಟ್ಟು ಮಲಗಿದ್ದ ಡ್ರೈವರ್, ಕ್ಯಾಬಿನ್‌ನಲ್ಲಿದ್ದ ಜಾಕ್ ತಲೆಯ ಮೇಲೆ ಬಿದ್ದು ಮರಣಹೊಂದಿದ್ದಾನೆ. ಈ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ಕ್ಲೀನರ್ ಹಗ್ಗ ಬಿಚ್ಚುವುದನ್ನು ಬಿಟ್ಟು ಗಾಬರಿಯಿಂದ ಡ್ರೈವರನನ್ನು ಹುಡುಕುವ ಸಂದರ್ಭದ ಸ್ವಾರಸ್ಯ. | 3 |

| | | |
|---|---|---|
| **36** | ದೀರ್ಘಗದ್ಯ: ಕೃಷ್ಣೇಗೌಡರ ಆನೆ<br>ಲೇಖಕರು : ಕೆ.ಪಿ.ಪೂರ್ಣಚಂದ್ರ ತೇಜಸ್ವಿ<br>ಜಂಕ್ಷನ್ ಬಾಕ್ಸ್ ಇದ್ದ ಹದಿನೇಳನೇ ಕಂಬದ ಮೇಲೆ ತಿಪ್ಪಣ್ಣ ಕುಳಿತಿದ್ದನ್ನು ಕಂಡು ಕೂಗಿ ಕರೆದರೂ ಮಾತಿಲ್ಲದ್ದರಿಂದ ರಮೇಶಬಾಬು ಹೇಳಿಕೆಯಂತೆ ಕಂಬ ಹತ್ತಿ ನೋಡಲು ಹೋದ ಲೈನ್‌ಮೆನ್ ಶಂಕರಪ್ಪ ಕಂಬ ಅರ್ಧ ಹತ್ತುತ್ತಿದ್ದಂತೆ ಸಿಡಿಲು ಹೊಡೆದಂತಾಗಿ ಜಾರಿ ದೊಪ್ಪನೆ ಕೆಳಗೆ ಬಿದ್ದು ಭೂತ ದರ್ಶನವಾದವನಂತೆ ದೂರನಿಂತು ರಮೇಶ್‌ಬಾಬುವಿಗೆ 'ಕಂಬದಲ್ಲಿ ಏನೋ ಸೇರ್ಕೊಂಡಿದೆ' ಎಂದು ಹೇಳುವ ಸಂದರ್ಭ. | **3** |
| | **ಈ- ವಿಭಾಗ** | |
| **ಅ** | | **2X4=8** |
| **37** | ತನಗೆ ಬಹುರೂಪಿಣೀ ವಿದ್ಯೆ ಸಿದ್ದಿ.. ರಾಮ ಲಕ್ಷ್ಮಣರನ್ನು ಕೊಲ್ಲುವೆ.. ತನಗೆ ಸೀತೆ ಒಲಿಯಬೇಕೆಂಬ ರಾವಣನ ಮಾತಿನಿಂದ 'ನನ್ನ ಮೇಲೆ ಕರುಣೆ ತೋರುವೆಯಾದರೆ, ಸಮರದಲ್ಲಿ ರಘುತನೂಜನ ಆಯಸ್ಸು- ಪ್ರಾಣ ಇರುವವರೆಗೂ ಬರಬೇಡ' ಎಂದೆನ್ನುತ್ತಾ ಮೂರ್ಛಿತಳಾದ ಸೀತೆಯ ದೀನಾವಸ್ಥೆಯನ್ನು ನೋಡಿದ ರಾವಣನಿಗೆ ಅನುಕಂಪ ಹುಟ್ಟಿ 'ಕದಡಿದ ನೀರು ತಿಳಿಯಾಗುವ ಹಾಗೆ' ಸೀತೆಯ ಮೇಲೆ ವೈರಾಗ್ಯ ಮೂಡಿತು. ಶ್ರೇಷ್ಠರಾದವರಲ್ಲಿ ನಿಷ್ಕಲ್ಮಷವಾದ ಪ್ರೀತಿ ಹುಟ್ಟುವ ರೀತಿ... | **4** |
| **38** | ಸಂಪತ್ತಿದ್ದೂ ಆಯುಷ್ಯವಿಲ್ಲದಿದ್ದರೆ ಫಲವಿಲ್ಲ, ಹೇಡಿಯ ಕೈಯಲ್ಲಿ ಚಂದ್ರಾಯುಧದಂತಹ ಪ್ರಬಲ ಅಸ್ತ್ರವಿದ್ದರೂ ನಿಷ್ಪ್ರಯೋಜಕ, ಹುಟ್ಟುಗುರುಡನ ಕೈಯಲ್ಲಿ ಕನ್ನಡಿಯಿದ್ದರೆ ಫಲವಿಲ್ಲ... ಮಂಗನ ಕೈಯ ಮಾಣಿಕ್ಯ ಅಪಮೌಲ್ಯಗೊಂಡಂತೆ ಶಿವಪಥವನ್ನರಿಯುವ ಸಂಕಲ್ಪಬಲ ನಿಜಭಕ್ತನ ಮೂಲ ಗುಣವಾಗಬೇಕು ಎಂಬುದನ್ನು ಬಸವಣ್ಣ ಪ್ರತಿಪಾದಿಸಿದ್ದಾರೆ. | **4** |
| **39** | ಕೌರವನು ಮುಂದಲೆ ಹಿಡಿದೆಳೆಸಿ ರಾಜಸಭೆಗೆ ತಂದಿದ್ದು, ಸೈಂಧವನು ಅರಣ್ಯವಾಸದಲ್ಲಿರುವಾಗ ಎಳೆದೊಯ್ಯಲು ಯತ್ನಿಸಿದ್ದು, ಈಗ ಕೀಚಕನೆಂಬ ಕುನ್ನಿಯು ಕಾಲಿಂದ ಒದೆದು ಅಪಮಾನಿಸಿದ್ದು- ಈ ಮೂರು ಅವಮಾನಗಳೇ ಸಾಕೆಂದು ದ್ರೌಪದಿಯು ಭೀಮನ ಬಳಿ ದುಃಖ ತೋಡಿಕೊಳ್ಳುವ ಬಗೆಯ ವಿವರಗಳು. | **4** |
| **40** | ಅ) ಇರಿಯಲು (ಕೊಲ್ಲಲು) ಬಲ್ಲವನಾಗಿರಬೇಕು<br>ಆ) ಅರಿಷಡ್ವರ್ಗಗಳು- ಕಾಮ, ಕ್ರೋಧ, ಲೋಭ, ಮದ, ಮತ್ಸರಗಳನ್ನು ತೊರೆದವನನ್ನು<br>ಇ) ಮಂತ್ರಿಯಾಗಲು ನಾನಾ ಚಮತ್ಕಾರಗಳನ್ನು ಬಲ್ಲವನಾಗಿರಬೇಕು. ರಾಜನಾದವನು ಮನದಲ್ಲಿ ಕೋಪವನ್ನು ತಾಳದೆ ಸಮಚಿತ್ತ ಉಳ್ಳವನಾಗಿರಬೇಕು. | **4** |

| | | |
|---|---|---|
| ಆ | | 1X4=4 |
| 41 | ಶಸ್ತ್ರಚಿಕಿತ್ಸೆಯ ನಂತರ ಬಸಲಿಂಗ ಮನೆಗೆ ಬಂದಾಗ ಹೇಗೋ ತಿಮ್ಮಪ್ಪ ಹೊಲೆಯರೆಂಬುದು ಗೊತ್ತಾದ ಸಿದ್ಲಿಂಗಿ ದೊಡ್ಡ ರಾದ್ಧಾಂತವನ್ನೆಬ್ಬಿಸಿದ್ದಳು… ಬಸಲಿಂಗನಲ್ಲಿಯೂ ತಿಮ್ಮಪ್ಪ ತನ್ನನ್ನು ಮುಟ್ಟುವ ಮೊದಲು ತಮ್ಮ ಜಾತಿಯ ಬಗ್ಗೆ ಹೇಳಬೇಕಿತ್ತು ಎಂದು ಕ್ಷಣಕಾಲ ಅನ್ನಿಸಿ, ತನ್ನ ಆಳ್ತನದಲ್ಲಿ ಏನೋ ಕಮ್ಮಿಯಾದಂತೆ ಭಾಸವಾಗಿ, ನೊಂದುಕೊಂಡು ಈ ವಿಷಯವನ್ನು ಯಾರಿಗೂ ಹೇಳಬಾರದೆಂದು ತೀರ್ಮಾನಿಸಿ, ಸೂತಕವನ್ನು ಪರಿಹರಿಸಲು ಮೈತೊಳೆಯಬೇಕೆಂದು… ತಿಮ್ಮಪ್ಪನವರ ಹಿತವಚನ ಅಸ್ಪಷ್ಟವಾಗಿ…. ಶುದ್ಧಿಯೆಂದು ಸಿದ್ಲಿಂಗಿ ಕಣ್ಣು ಮಾತ್ರ ನೆನೆಯದಂತೆ ಬಿಸಿ ಬಿಸಿ ನೀರು ಹೋಯ್ದು ಸ್ನಾನ ಮಾಡಿಸಿದಳು. | 4 |
| 42 | ತನ್ನ ಬೆವರಿನ ಬೆಲೆ ಕಳೆದ ಲೋಟ… ಕಳ್ಳತನದ ಆರೋಪ… ಕುಟುಂಬಕ್ಕಾದ ಅಪಮಾನ. ಏಟುತಿಂದ ಗುಡ್ಡ… ಸಂಕಟವುಂಡ ಜೀವ ವಿವೇಚನೆ ಕಳೆದುಕೊಂಡು… ಹೊಳೆಯ ಆಳ ಮಡುವತ್ತ ಮತ್ತೆ ಬೆಳ್ಳಿಲೋಟವನ್ನು ಎಸೆದಳು. ಸ್ವಾಭಿಮಾನಕ್ಕೆ ಧಕ್ಕೆ… ಶೋಷಿತರ ಪ್ರತಿರೋಧ.. | 4 |
| ಇ | | 1X4=4 |
| 43 | ಮನೆ ನಲ್ಲಿಗೆ ಹಾಕಿದ್ದ ಪೈಪಿನಲ್ಲಿ ನೀರು ಬರುವುದು ನಿಂತಿತ್ತು. ಪೈಪು ಇಡಲು ಮಾಡಿದ್ದ ದಾರಿ ಎಲ್ಲ ಗುಂಡಿ ಬಿದ್ದು ಪೈಪುಗಳು ಪುಡಿಪುಡಿಯಾಗಿ ಗುಂಡಿಯ ಒಳಗೆ ಹುಗಿದು ಹೋಗಿದ್ದವು. ಗುಂಡಿಯೊಳಗೆಲ್ಲಾ ನೀರು ತುಂಬಿಕೊಂಡಿದ್ದು, ಆನೆ ಹೆಜ್ಜೆ ಇಟ್ಟು ಸಣ್ಣ ಸಣ್ಣ ಬಾವಿಗಳೇ ನಿರ್ಮಾಣವಾಗಿದ್ದವು. ಹಾಗೂ ಬೇಲಿ ಹಲವೆಡೆ ಹಾಳಾಗಿತ್ತು… ಇದೆಲ್ಲದರ ವಿವರಣೆ.. | 4 |
| 44 | ಡ್ರೈವರ್ ಅಬ್ಬಾಸ್ ಲೋಡು ಲಾರಿ ಚಾಲನೆ ಮಾಡಿಕೊಂಡು ಬರುವಾಗ ಎರಡು ದಂ ಬೀಡಿ ಸೇದಬೇಕೆಂಬ ಚಪಲ ಭಾದಿಸಿ, ಕ್ಲೀನರ್ ಕೃಷ್ಣನಿಗೆ ಸ್ಟೇರಿಂಗ್ ಹಿಡಿದುಕೊಳ್ಳಲು ಹೇಳಿ, ಬೀಡಿ ಹಚ್ಚಿಕೊಂಡು ಒಂದು ದಂ ಎಳೆದು ತಲೆಯೆತ್ತುವಷ್ಟರಲ್ಲಿ ಲಾರಿ ರಸ್ತೆಯಿಂದ ಪಕ್ಕಕ್ಕೆ ಹೊರಳಿ ಎದುರಿಗಿದ್ದ ಗೋಣಿಮರದತ್ತ ನುಗ್ಗಿತು. ಸ್ಟೇರಿಂಗ್ ಬಿಡುವಂತೆ ಕೃಷ್ಣನಿಗೆ ಹೇಳಿದ ಅಬ್ಬಾಸನಿಗೆ ಗಡಿಬಿಡಿಯಲ್ಲಿ ಬ್ರೇಕ್ ಹಾಕಬೇಕೆಂಬುದು ನೆನಪಾಗಲಿಲ್ಲ. ಲಾರಿ ಮರಕ್ಕೆ ಗುದ್ದಿದ ಪರಿಣಾಮ ಮರದ ದಿಮ್ಮಿಗಳು ಮುನ್ನುಗ್ಗಿ ಬಂದು, ದಿಮ್ಮಿ ಮತ್ತು ಮರದ ನಡುವೆ ಸಿಲುಕಿದ ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರು ಅಪ್ಪಚ್ಚಿಯಾದರು. ಹೀಗಾಗಿ ಇವರಿಬ್ಬರ ಸಾವಿಗೆ ಅಬ್ಬಾಸನ ಬೀಡಿ ಸೇದುವ ಚಪಲ ಕಾರಣವೇ ಹೊರತು, ಆನೆಯಲ್ಲ. | 4 |

| | ಉ- ವಿಭಾಗ | |
|---|---|---|
| ಅ | | 4X2=8 |
| 45 | ಬಟ್ಟೆ : ವಸ್ತ್ರ, ದಾರಿ<br>ಕವಿ : ಆವರಿಸು, ಕಾವ್ಯರಚನೆಕಾರ<br>ಅರಿ : ವೈರಿ, ತಿಳಿ | 2 |
| 46 | ಕಲಿ, ಗಟ್ಟಿ, ಶ್ರೇಷ್ಠ | 2 |
| 47 | ಜೋಗಿ, ಪರಿಕಿಸು, ಜಸ | 2 |
| 48 | ಓದು, ಬೀಸು, ಹಾಡು | 2 |
| 49 | ನುಡಿಗಟ್ಟುಗಳನ್ನು ಅರ್ಥಪೂರ್ಣವಾಗಿ ಬಳಸಿದ ಎರಡು ವಾಕ್ಯ ರಚಿಸಬೇಕು | 2 |
| 50 | ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಬೇಕು | 2 |
| ಆ | | |
| 51 | ಪ್ರಬಂಧ:<br>(ಪೀಠಿಕೆ- 1, ವಿಷಯ ಪ್ರತಿಪಾದನೆ-2, ಮುಕ್ತಾಯಕ್ಕೆ -1 ಅಂಕಗಳು)<br>ಆಯ್ದುಕೊಂಡ ವಿಷಯವನ್ನು ಕುರಿತ ವಿದ್ಯಾರ್ಥಿಯ ಗ್ರಹಿಕೆ ಮತ್ತು ಅದು ಪ್ರಬಂಧದಲ್ಲಿ ಪೀಠಿಕೆ, ವಿಷಯ ಪ್ರತಿಪಾದನೆ, ಉಪಸಂಹಾರಗಳಲ್ಲಿ ನಿರೂಪಿತವಾದ ಬಗೆಯನ್ನು ಗಮನಿಸಿ, ಸ್ವ ವಿವೇಚನೆಯಿಂದ ಅಂಕ ನಿಗದಿ ಮಾಡುವುದು. | 4 |
| 52 | ಪತ್ರಲೇಖನ:<br>(ಪತ್ರದ ಮಾದರಿ, ದಿನಾಂಕ ಮತ್ತು ವಿಳಾಸಗಳಿಗೆ -01 ಅಂಕ, ಪತ್ರದ ಒಡಲು ಮತ್ತು ವಿಷಯ ಪ್ರಸ್ತಾವನೆಗೆ -02 ಅಂಕ, ಪತ್ರದ ಮುಕ್ತಾಯಕ್ಕೆ -01 ಅಂಕ)<br>ಮೌಲ್ಯಮಾಪಕರು ಈ ಮೇಲೆ ಸೂಚಿಸಿದ ಅಂಶಗಳೊಂದಿಗೆ ಸ್ವವಿವೇಚನೆಯಿಂದ ಅಂಕ ನಿಗದಿ ಮಾಡುವುದು. | 4 |